Indian Journal of History and Archaeology

ISSN (E):2582-225X
VOL-2, ISSUE -5,JANUARY-FEBRUARY, 2021, 01-07

# ಬ್ರಹ್ಮತಂತ್ರ ಸ್ವತಂತ್ರ ಪರಕಾಲ ಮಠದೊಂದಿಗೆ ಶ್ರೀ ಜಯಚಾಮರಾಜ ಒಡೆಯರ ಸಂಬಂಧ

**ಶಿವಶಂಕರಮೂರ್ತಿ.ಡಿ.ಆರ್**

**ಶಿವಶಂಕರಮೂರ್ತಿ.ಡಿ.ಆರ್**
ಸಂಶೋಧಕರು
ಇತಿಹಾಸ ಅಧ್ಯಯನ ವಿಭಾಗ
ಮಾನಸಗಂಗೋತ್ರಿ,
ಮೈಸೂರು.

ಮೈಸೂರಿನ ಒಡೆಯರು ಪ್ರಾರಂಭದಿಂದಲೂ ಪರಕಾಲ ಮಠದೊಂದಿಗೆ ಸಂಪರ್ಕ ಇಟ್ಟುಕೊಂಡಿದ್ದರು. ಈ ಮನೆತನದ ಸ್ಥಾಪಕರೆನಿಸಿದ ಯದುರಾಯರ ಕಾಲದಿಂದಲೂ ಮೈಸೂರಿನ ದೊರೆಗಳಿಗೂ ಪರಕಾಲ ಮಠಕ್ಕೆ ಸಂಬಂಧ ಇತ್ತೆಂಬುದು ದಾಖಲೆಗಳಿಂದ ಧೃಡಪಟ್ಟಿದೆ. ಒಡೆಯರವರ ಜೀವನ ಆಧ್ಯಾತ್ಮಿಕ ನೆಲೆಗಟ್ಟಿನ ಮೇಲೆಯೇ ಸಾಗಿತ್ತು. ತಮ್ಮ ಜೀವನದ ಪ್ರತಿನಿತ್ಯದ ಚಟುವಟಿಕೆಗಳಲ್ಲಿ ಭಗವತ್ಪೂಜೆ, ವೇದೋಪನಿಷತ್ತುಗಳ ಅಧ್ಯಯನಕ್ಕಾಗಿ ಸಾಕಷ್ಟು ಸಮಯವನ್ನು ಮೀಸಲಾಗಿಟ್ಟಿದ್ದರು. ಶ್ರೀಮಠದ ಗುರುಗಳನ್ನು ಆಗಾಗ ಅರಮನೆಗೆ ಆಹ್ವಾನಿಸಿ ಪೂಜಿಸುತಿದ್ದರು. ಈಗಲೂ ಸಹ ಅರಮನೆಯಲ್ಲಿನ ಅನೇಕ ಭಿತ್ತಿ ಚಿತ್ರಗಳಲ್ಲಿ, ಅಲ್ಲಲ್ಲಿ ತೂಗಿ ಹಾಕಿರುವ ಭಾವಚಿತ್ರಗಳಲ್ಲಿ ಅನೇಕ ಮಠಾಧಿಪತಿಗಳನ್ನು ಕಾಣಬಹುದು.

ಜಗನ್ಮೋಹನ ಅರಮನೆಯ ಉತ್ತರ ಭಾಗದಲ್ಲಿರುವ ಕೃಷ್ಣವಿಲಾಸ ರಸ್ತೆಯಲ್ಲಿರುವ ಶ್ರೀವೈಷ್ಣವ ಮಠವೇ ಪರಕಾಲ ಮಠ. ದಕ್ಷಿಣ ಭಾರತದಲ್ಲಿ ಪ್ರಸಿದ್ಧವಾದ ಈ ಮಠವು ಕ್ರಿಶ. 1370ರಲ್ಲಿ ಬ್ರಹ್ಮತಂತ್ರ ಸ್ವತಂತ್ರ ಜೀಯರ್ ಸ್ವಾಮಿಗಳಿಂದ ಕಾಂಚೀಪುರದಲ್ಲಿ ಸ್ಥಾಪಿಸಲ್ಪಟ್ಟಿತು.[1] 600 ವರ್ಷಗಳಿಗೂ ಮೀರಿದ ಇತಿಹಾಸ ಇರುವ ಈ ಮಠಕ್ಕೆ ಮೂಲ ಕಾಂಚಿಪುರದ ವರದರಾಜ ದೇವಾಲಯದಲ್ಲಿರುವ ತಮಿಳು ಮತ್ತು ಗ್ರಂಥ ಲಿಪಿಗಳ ಶಾಸನದಿಂದ 1395ರಲ್ಲಿ ಶ್ರೀ ವೈಷ್ಣವ ದಾಸರಿಗೆ 'ಬ್ರಹ್ಮತಂತ್ರ ಸ್ವತಂತ್ರ್ಯ ಜೀಯರ್' ಎಂಬ ಬಿರುದನ್ನು ನೀಡಲಾಯಿತು ಎಂದು ತಿಳಿದುಬರುತ್ತದೆ.[2] ಒಮ್ಮೆ ಯದುರಾಯರು

ತಿರುಪತಿದೇವಸ್ಥಾನದ ಶ್ರೀಕಾರ್ಯಧುರಂಧರನಾಗಿ ಶ್ರೀಮಠದ ಸೇವಾಕೈಂಕರ್ಯಗಳನ್ನು ಬಹು ಅಚ್ಚುಕಟ್ಟಾಗಿ ವ್ಯವಸ್ಥಿತವಾಗಿ ನಡೆಸುತ್ತಿದ್ದ ಬ್ರಹ್ಮತಂತ್ರ ಸ್ವತಂತ್ರ ಜೀಯರ ತೇಜಸ್ಸಿಗೂ ಪ್ರಭಾವಕ್ಕೂ ಒಳಗಾಗಿ, ಅವರೇ ತಮ್ಮ ಗುರುಗಳಾಗಿರಬೇಕೆಂದು ಪ್ರಾರ್ಥಿಸಿ, ಅವರಿಂದ ಚಕ್ರಾಂಕನಾಗಿ ವೈಷ್ಣವದೀಕ್ಷೆಯನ್ನು ಪಡೆದರು.[3] ಹೀಗೆ ಬ್ರಹ್ಮತಂತ್ರ ಗುರುಪೀಠಕ್ಕೂ, ಮೈಸೂರು ರಾಜವಂಶದ ಮೂಲಪುರುಷರಿಗೂ, ಗುರುಶಿಷ್ಯ ಸಂಬಂಧವೇರ್ಪಟ್ಟು ಮುಂದೆ ಇದು ಜಾಜ್ವಲಮಾನವಾಗಿ ಅಭಿವೃದ್ಧಿಗೆ ಬಂದಿತು.

ಮೈಸೂರು ಒಡೆಯರು ಶ್ರೀ ಪರಕಾಲ ಮಠದ ಯತಿಶ್ರೇಷ್ಠರಲ್ಲಿ ಆಚಾರ್ಯವರಣ ಮಾಡಿಕೊಂಡು, ಅವರಿಂದ ಚಕ್ರಾಂಕನ, ಮಂತ್ರೋಪದೇಶ, ಗ್ರಂಥಕಾಲಾಕ್ಷೇಪ ಮತ್ತು ಪ್ರಪತ್ತಿಯನ್ನು ಅನುಗ್ರಹಪೂರ್ವಕವಾಗಿ ಪಡೆದು, ಅನುಸ್ಯೂತವಾಗಿ ನಡೆದುಕೊಳ್ಳುತ್ತಾ ಬರುತ್ತಿದ್ದರು. ಆಚಾರ್ಯವರ್ಯರೂ ಪರಂಪರಾನುಗತ ಕ್ರಮದಂತೆ ರಾಜಮನೆತನದ ಶ್ರೇಯ, ಪ್ರಾರ್ಥನೆ ಮಾಡುತ್ತಾ ಅವರ ಯೋಗಕ್ಷೇಮವನ್ನು ವಿಚಾರಿಸುತ್ತಾ, ಅವರ ಪುರೋಭಿವೃದ್ಧಿಗಾಗಿ ಭಗವಂತನ ಮತ್ತು ಭಾಗವತರ ಸೇವೆ ನಡೆಸುತ್ತಾ ಇಹಪರ ಸೌಖ್ಯಕ್ಕಾಗಿ ಶಿಷ್ಯರಿಗೆ ಶರಣಾಗತಿಯನ್ನು ಅನುಗ್ರಹಿಸುತ್ತಾ ಬರುತ್ತಿದ್ದರು. ಹಾಗೆಯೇ ಶಿಷ್ಯರುಗಳಿಂದ ಸಂಭಾವನೆ,ಭೂಮಿಕಾಣಿಕೆಗಳನ್ನು ಪಡೆದು ಉಭಯ ಕುಲಧನವಾದ ಶ್ರೀಲಕ್ಷ್ಮೀಹಯಗ್ರೀವ, ಶ್ರೀಲಕ್ಷ್ಮೀನಾರಾಯಣರ ಕೈಂಕರ್ಯ, ಸಮಾರಾಧನೆ, ಧರ್ಮದಿಗ್ವಿಜಯ ಮೊದಲಾದವುಗಳನ್ನು ಅವಿಚ್ಛಿನ್ನವಾಗಿ ನಡೆಸಿಕೊಂಡು ಬರುತ್ತಿದ್ದರು. ಈ ಎಲ್ಲಾ ಧರ್ಮಕಾರ್ಯಗಳು ಯಶಸ್ವಿಯಾಗಿ ನಡೆಯುವುದಕ್ಕೆ ಮಹಾರಾಜರು ಸಹಾಯ ಮಾಡುತ್ತಿದ್ದರು. ಪ್ರಜೆಗಳು ತಮ್ಮ ತಮ್ಮ ಧರ್ಮಗಳನ್ನು ಅನುಸರಿಸುತ್ತ ಶಾಂತಿ ಸಂಧಾನದಿಂದ ಸುಖಜೀವನ ನಡೆಸುವುದಕ್ಕೆ ಇಂತಹ ವ್ಯವಸ್ಥೆ ಸಹಾಯ ಮಾಡುತ್ತಿತ್ತು. ಹೀಗೆ ಶ್ರೀಮಠದ ಆಸ್ಥಾನವನ್ನು ಅಲಂಕರಿಸಿದ ಯತಿವರ್ಯರಿಗೂ ಮೈಸೂರು ರಾಜ್ಯವನ್ನು ಆಳುತ್ತಿದ್ದ ಮಹಾರಾಜರ ಪರಂಪರೆಗೂ ನಿಕಟ ಸಂಬಂಧ ಬೆಳೆದು ಬಂದಿತು.

ಮಹಾರಾಜ ಶ್ರೀ ಜಯಚಾಮರಾಜ ಒಡೆಯರು ಪರಕಾಲ ಮಠ ಮತ್ತು ಗುರುಮನೆ ವಿಷಯದಲ್ಲಿ ತಮ್ಮ ಪೂರ್ವಿಕರಂತೆ ವಿಶೇಷ ರೀತಿಯ ಶ್ರದ್ಧೆ, ಉತ್ಸಾಹ ಹೊಂದಿದ್ದರು. 1919ನೇ ಜುಲೈ 18ನೇ ತಾರೀಖಿನ ಸಿದ್ಧಾರ್ಥ ಸಂವತ್ಸರದ ಆಷಾಢ ಬಹುಳ ಷಷ್ಠಿ ಶುಕ್ರವಾರ ಸಾಯಂಕಾಲ 6 ಗಂಟೆ 13 ನಿಮಿಷದಲ್ಲಿ ಶ್ರೀ ಜಯಚಾಮರಾಜೇಂದ್ರ ಒಡೆಯರ್ ಅವರ ಜನನವಾಯಿತು. ಮೈಸೂರಿನ ಶ್ರೀಮದ್ ಯುವರಾಜ ಕಂಠೀರವ ನರಸಿಂಹರಾಜ ಒಡೆಯರು ಮತ್ತು ಇವರ ಧರ್ಮಪತ್ನಿ ಯುವರಾಣಿ ಕೆಂಪು ಚೆಲುವ ರಾಜಮ್ಮಣ್ಣಿ ಇವರ ದಿವ್ಯ ಗರ್ಭದಲ್ಲಿ ಜನಿಸಿದ ಸುಪುತ್ರರತ್ನ ಶ್ರೀ ಒಡೆಯರಿಗೆ ಹುಟ್ಟಿದ 12ನೇ ದಿನದಲ್ಲಿ ಅತ್ಯಂತ ವೈಭವದಿಂದ ನಾಮಕರಣ ಮಹೋತ್ಸವವು ಅರಮನೆಯಲ್ಲಿ ನಡೆಯಿತು. ಅಂದಿನ ಮಹೋತ್ಸವಕ್ಕೆ ರಾಜಗುರುಗಳಾದ ಪರಕಾಲ ಮಠದ ಸ್ವಾಮಿಜಿಯವರು ದಯಮಾಡಿಸಿ ರಾಜಕುಮಾರನನ್ನು ಮತ್ತು ಅವರ

ಮಾತಾಪಿತೃಗಳನ್ನು ಆಶೀರ್ವದಿಸಿದರು.[4] ಶ್ರೀ ಜಯಚಾಮರಾಜ ಒಡೆಯರಿಗೂ, ಉತ್ತರ ಭಾರತದ ಚರಕಾರಿ ಸಂಸ್ಥಾನದ ರಾಜಕುಮಾರಿ ಸತ್ಯಪ್ರೇಮಕುಮಾರಿದೇವಿಯವರಿಗೂ ಲಗ್ನ ನಿಶ್ಚಯವಾದ ಸಂದರ್ಭದಲ್ಲಿ ಲಗ್ನಪತ್ರಿಕೆಯನ್ನು ಪಂಚಕಲಶದ ಮೇನಾದಲ್ಲಿಟ್ಟು, ಹದಿಮೂರು ತಟ್ಟೆಗಳಲ್ಲಿ ಫಲಪುಷ್ಪ, ಸುತ್ತುವೀಳ್ಯ ಸಮೇತ ಸಕಲ ರಾಜ ಮರ್ಯಾದೆಯಿಂದ 1938 ನೆಯ ಇಸವಿ ಏಪ್ರಿಲ್ ಇಪ್ಪತ್ತನಾಲ್ಕನೆಯ ತಾರೀಖು ಶ್ರೀ ಮಠಕ್ಕೆ ತರಲಾಯಿತು. ಅರಮನೆ ಋತ್ವಿಕ್ಕುಗಳು, ಪುರೋಹಿತರು, ಜೋಯ್ಸರು, ಹೆಚ್.ಎಲ್.ದೇವರಾಜೇ ಅರಸಿನವರ ನೇತೃತ್ವದಲ್ಲಿ ಬಂದರು. ಕಾಲಕ್ಷೇಪ ಕೊಠಡಿಯಲ್ಲಿ ಎಲ್ಲವನ್ನೂ ಗುರುಗಳ ಮುಂದೆ ಇಟ್ಟು ಲಗ್ನಪತ್ರಿಕೆ ಅರ್ಪಿಸಲಾಯಿತು. ಲಗ್ನಪತ್ರಿಕೆಗೆ ಗುರುಗಳು ಫಲಪುಷ್ಪ ತಟ್ಟೆಗಳನ್ನು ಅರ್ಪಿಸಿದರು. ಅನಂತರ ಬಂದಿದ್ದವರಿಗೆಲ್ಲಾ ಶ್ರೀ ಶ್ರೀಗಳವರು ಫಲಮಂತ್ರಾಕ್ಷತೆ ಕೊಟ್ಟರು.[5] ಶಾಸ್ತ್ರೋಕ್ತವಾಗಿ ಉಪನಯನವಾದ ನಂತರ 1938ನೇ ಮೇ 15ರಂದು ರಾಜಕುಮಾರರ ವಿವಾಹ ಸಾಂಗವಾಗಿ ನೆರವೇರಿತು. ರಾಜವಧೂವರರಿಗೆ ಗುರುಗಳು ಖಿಲ್ಲತ್ತು, ಪೀತಾಂಬರ, ಹಾರ, ತುರಾಯಿ, ಫಲ ಮಂತ್ರಾಕ್ಷತೆ ಎಲ್ಲವನ್ನೂ ಪಲ್ಲಕ್ಕಿಯಲ್ಲಿಟ್ಟು ರಾಜಮರ್ಯಾದೆಯಿಂದ ಅರಮನೆಗೆ ಕಳುಹಿಸಿದರು.

ಶ್ರೀ ಜಯಚಾಮರಾಜ ಒಡೆಯರ ಪಟ್ಟಾಭಿಷೇಕ ಮಹೋತ್ಸವ ಅತ್ಯಂತ ವಿಜೃಂಭಣೆಯಿಂದ 1940ನೆಯ ಇಸವಿ ಸೆಪ್ಟೆಂಬರ್ ಎಂಟನೇ ತಾರೀಖು ನಡೆಯಿತು. ಈ ಸಂದರ್ಭದಲ್ಲಿ ಶಾಸ್ತ್ರೀಯ ಕಾರ್ಯಗಳೆಲ್ಲ ಮುಗಿದ ಮೇಲೆ ಪರಕಾಲ ಮಠದಿಂದ ಗುರುಗಳು ಕಳುಹಿಸಿದ್ದ ಖಿಲ್ಲತ್ತು, ಹಾರ, ತುರಾಯಿ, ಫಲಮಂತ್ರಾಕ್ಷತೆಗಳನ್ನು ಮಹಾರಾಜರು ಸಿಂಹಾಸನದಲ್ಲಿರುವಾಗಲೇ ಅರ್ಪಿಸಲಾಯಿತು. ಮಧ್ಯಾಹ್ನ ನೆಚ್ಚಿನ ಗುರುಗಳಾದ ಶ್ರೀಮಧಭಿನವ ರಂಗನಾಥಸ್ವಾಮಿಗಳು ಅರಮನೆಗೆ ರಾಜಮರ್ಯಾದೆಗಳಿಂದ ದಯಾಮಾಡಿಸಿ, ಯುವಕ ಮಹಾರಾಜರಿಗೆ ಉಪದೇಶವಿತ್ತುದಲ್ಲದೆ, ನೂತನ ಮಹಾರಾಜರ ರಾಜ್ಯಭಾರವು ಯಶಸ್ವಿಯಾಗುವಂತೆ ಶ್ರೀಲಕ್ಷ್ಮೀಹಯಾಸ್ಯನು ಕರುಣಿಸಲೆಂದು ಹಾರೈಸಿ, ಶ್ರೀ ಮಠಕ್ಕೆ ದಯಮಾಡಿಸಿದರು.[6]

ಶ್ರೀಮದಭಿನವರಂಗನಾಥ ಬ್ರಹ್ಮತಂತ್ರ ಪರಕಾಲಸ್ವಾಮಿಗಳ ಷಷ್ಟ್ಯಬ್ಧ ಶಾಂತಿ ಉತ್ಸವವು ತಾರಣಸಂವತ್ಸರ ಆಷಾಢ ಕೃಷ್ಣಪುನರ್ವಸು ನಕ್ಷತ್ರದ ದಿವಸ ಅಂದರೆ 1944ನೆಯ ಇಸವಿ ಜುಲೈ ಹದಿನೆಂಟರಲ್ಲಿ, ಶ್ರೀ ಮನ್ಮಹಾರಾಜಾ ಸಂಸ್ಕೃತ ಪಾಠಶಾಲೆಯಲ್ಲಿ ಉಪನ್ಯಾಸ ತೊಟ್ಟಿಯಲ್ಲಿ ಅತ್ಯಂತ ವೈಭವಯುತವಾಗಿ ನಡೆಯಿತು. ಈ ಉತ್ಸವವನ್ನು ಶ್ರೀಮಠದಲ್ಲಿ ನಡೆಸಲು ಶ್ರೀಶ್ರೀಗಳು ಸಮ್ಮತಿಪಡಲಿಲ್ಲ. ಈ ಉತ್ಸವವನ್ನು ನೆರವೇರಿಸುವುದಕ್ಕೆ ಒಂದು ನಿರ್ಣೀತ ಕಾರ್ಯನಿರ್ವಾಹಕ ಸಮಿತಿಯು ಪ್ರಭುಗಳ ಅಪ್ಪಣೆ ಮೇರೆಗೆ ಏರ್ಪಟ್ಟಿತು. ಸಮಿತಿಯು ಉತ್ಸವವನ್ನು ಜುಲೈ 18 ಮತ್ತು 19ರಲ್ಲಿ ನಡೆಸತಕ್ಕದೆಂದು ತೀರ್ಮಾನಿಸಿತು. ಈ ಎರಡು ದಿನಗಳಲ್ಲಿಯೂ ಶ್ರೀಶ್ರೀಗಳ ಪಾದುಕೆ ಮತ್ತು ಪ್ರತಿಬಿಂಬವನ್ನು ಪಲ್ಲಕ್ಕಿಯಲ್ಲಿಟ್ಟು ಚಾತುರ್ಮಾಸ ಸಂಕಲ್ಪ ಕಟ್ಟಳೆ ಮೇರೆ, ಇಸ್ತಕಪಾಲ್ ಮರ್ಯಾದೆಯಿಂದ ಮೆರವಣಿಗೆಯಲ್ಲಿ ಶ್ರೀಮಠದಿಂದ

ಪಾಠಶಾಲೆಗೆ ಬಿಜಯ ಮಾಡಿಸಲಾಯಿತು. ಶಾಂತಿ ಉತ್ಸವದ ಅಂಗವಾಗಿ ನವಗ್ರಹ ಹೋಮ, ಅಯುತ ತಿಲಹೋಮ, ಪ್ರಧಾನ ಹೋಮಹವನ ಪೂರ್ಣಾಹುತಿ ಎಲ್ಲವೂ ಆದ ಮೇಲೆ ಶ್ರೀಶ್ರೀಗಳ ಪ್ರತಿಬಿಂಬಕ್ಕೆ ಸಮಂತ್ರಕ ಪ್ರೋಕ್ಷಣೆ ಆಯಿತು. ಪಾದುಕೆಗಳನ್ನು ಅಷ್ಟೋತ್ತರ ಶತನಾಮಾವಳಿಯಿಂದ ಅರ್ಚಿಸಲಾಯಿತು. ಶಾತ್ತುಮರೈ, ಮಂಗಳಾರತಿ, ತೀರ್ಥ ಪ್ರಸಾದ ವಿನಿಯೋಗ, ಭೂರಿ ದಕ್ಷಿಣೆ ಹಂಚಿದ ಮೇಲೆ ಪಾದುಕೆ ಭಾವಚಿತ್ರವನ್ನು ಚಿನ್ನದ ಪಲ್ಲಕ್ಕಿಯಲ್ಲಿಟ್ಟು ಅಲಂಕಾರ ಮಾಡಿ ದೊಡ್ಡ ಇಸ್ತಕಪಾಲ್ ಮರ್ಯಾದೆಯಿಂದ ಮೆರವಣಿಗೆಯಲ್ಲಿ ಶ್ರೀಮಠಕ್ಕೆ ಬಿಜಯಮಾಡಿಸಲಾಯಿತು. ಮೇಲ್ಕಂಡ ಎರಡು ದಿನಗಳಲ್ಲಿಯೂ, ಶ್ರೀ ಲಕ್ಷ್ಮೀಹಯಗ್ರೀವ ದೇವರಿಗೆ ವಜ್ರಪಡಿ ಡೋಲೋತ್ಸವ ನಡೆಯಿತು. ಉತ್ಸವದ ವಿವರಗಳೆಲ್ಲವನ್ನೂ ಮಹಾರಾಜರ ಗಮನಕ್ಕೆ ತರಲಾಯಿತು. ಉತ್ಸವದ ವೆಚ್ಚಕ್ಕಾಗಿ ಮಹಾರಾಜರು ಐದು ಸಹಸ್ರ ರೂಪಾಯಿಗಳನ್ನು ಕೊಟ್ಟರು.[7] ಶ್ರೀಮಠಸ್ಥರಿಗೂ ಸಂತರ್ಪಣೆ ಏರ್ಪಡಿಸಲಾಗಿತ್ತು.

ಅರಮನೆ ಕಲ್ಯಾಣ ಮಂಟಪದಲ್ಲಿ ರಾಜಕುಮಾರಿ ಗಾಯತ್ರಿದೇವಿಯರ ನಾಮಕರಣ ಮಹೋತ್ಸವವು 1946ನೇಯ ಇಸವಿ ಅಕ್ಟೋಬರ್ ಇಪ್ಪತ್ತೊಂದನೆ ತಾರೀಖು ನಡೆಯಿತು. ಇದರ ಅಂಗವಾಗಿ ಗುರುಗಳು ಹಿಂದಿನ ಪದ್ಧತಿಯಂತೆ, ಪಾದಪೂಜೆಗಾಗಿ ಅರಮನೆಗೆ ದಯಮಾಡಿಸಿದರು. ಶ್ರೀಶ್ರೀಗಳ ಅನುಗ್ರಹ ಪೂರ್ವಕ ಆಶೀರ್ವಾದ ಖಿಲ್ಲತ್ತು, ಹಾರ, ತುರಾಯಿ, ಫಲಮಂತ್ರಾಕ್ಷತೆಯನ್ನೂ ರಾಜದಂಪತಿಗಳಿಗೂ, ರಾಜಕುಮಾರಿಗೂ ಸಲ್ಲಿಸಲಾಯಿತು. ಮಹಾರಾಜರು ಸಂಭಾವನೆ ಸಲ್ಲಿಸಿದ ಮೇಲೆ ಶ್ರೀಪಾದತೀರ್ಥ ತೆಗೆದುಕೊಂಡರು.[8] ಅನಂತರ ಸಕಲ ರಾಜ ಮರ್ಯಾದೆಯೊಡನೆ ಶ್ರೀಶ್ರೀಗಳು ಶ್ರೀಮಠಕ್ಕೆ ಹಿಂತಿರುಗಿದರು.

1947ನೆಯ ಇಸವಿ ಜುಲೈ ಆರನೆಯ ತಾರೀಖು ಮಹಾರಾಜರು ಶ್ರೀ ಜಯಚಾಮರಾಜ ಒಡೆಯರು, ಪಟ್ಟಾಭಿಷೇಕವಾದ ಮೇಲೆ ಮೊದಲಬಾರಿಗೆ ಶ್ರೀಮಠಕ್ಕೆ ಬರುವುದಾಗಿ ಹುಜೂರು ಸೆಕ್ರಟರಿ ನಿರಂಜನರಾಜೇ ಅರಸ್ ಅವರ ಮೂಲಕ ಹೇಳಿಕಳುಹಿಸಿದರು. ಪುಣ್ಯವಶಾತ್ ಅಂದು ಶ್ರೀ ನಿಗಮಾಂತಮಹಾದೇಶಿಕರ ಮಾಸ ತಿರುನಕ್ಷತ್ರ ಶ್ರವಣ. ಶ್ರೀ ಲಕ್ಷ್ಮೀಹಯಗ್ರೀವ ಸ್ವಾಮಿಯ ಅವತಾರದ ದಿವಸ. ಅಂದು ವಿಶೇಷ ಪೂಜೆ. ಅಭಿಷೇಕವಾದ ಮೇಲೆ, ಸ್ವಾಮಿಯನ್ನು ವಜ್ರಪಡಿ ಡೋಲಿನಲ್ಲಿ ಬಿಜಯಮಾಡಿಸಿ, ಬಹು ಅಂದವಾಗಿ ಅಲಂಕರಿಸಿ ಆರಾಧನೆ ಮಾಡಲಾಗಿತ್ತು. ಇಂತಹ ಪುಣ್ಯತಮವಾದ ದಿವಸದಲ್ಲಿ ನೂತನವಾಗಿ ಪಟ್ಟಾಭಿಷಕ್ತರಾದ ಮಹಾರಾಜರು ಪ್ರಥಮ ಬಾರಿಗೆ ಭಗವಂತನ ದರ್ಶನ ಗುರು ಸನ್ನಿಧಿಯಲ್ಲಿ ದೊರೆತುದು ಅವರ ಭಾಗ್ಯ. ಮಹಾರಾಜರ ಭೇಟಿ ಖಾಸಗಿಯಾದದ್ದಾದರೂ, ಶ್ರೀಮಠದ ಮಹಾದ್ವಾರದಲ್ಲಿ ಶ್ರೀಕಾರ್ಯಕರ್ತರು, ಪೂರ್ಣಕುಂಭ ಮರ್ಯಾದೆಯಿಂದ ಸ್ವಾಗತಿಸಿದರು. ಪುಷ್ಪವೃಷ್ಟಿ ಮಾಡಿದರು. ನೇರವಾಗಿ ದೇವರ ಸನ್ನಿಧಿಗೆ ಕರೆತಂದರು. ದಿವ್ಯವಾದ ರಜತ ಮಂಟಪವನ್ನೂ, ವಜ್ರಪಡಿ ತೊಟ್ಟಿಲಿನಲ್ಲಿ ಬಿಜಯಮಾಡಿಸಿದ್ದ ಶ್ರೀ ಲಕ್ಷ್ಮೀ ಹಯಗ್ರೀವಸ್ವಾಮಿಯನ್ನು ತರುಣ ಮಹಾರಾಜರು ಆನಂದದಿಂದ ದರ್ಶನ

ಮಾಡಿದರು. ದೇವರಿಗೆ ದರಿಸಿದ ಹಾರವನ್ನು ತೆಗೆದು ಮಹಾರಾಜರಿಗೆ ಕೊರಳಲ್ಲಿ ಧರಿಸಲಾಯಿತು. ಶಠಾರಿಸೇವೆ ಆದ ಮೇಲೆ, ತೀರ್ಥಪ್ರಸಾದ ಕೊಡಲಾಯಿತು. ಅನಂತರ ಶ್ರೀ ಶ್ರೀಗಳು ಕಾಲಕ್ಷೇಪ ಕೊಠಡಿಗೆ ದಯಮಾಡಿಸಿದರು ಮಹಾರಾಜರೂ ಅಲ್ಲಿಗೆ ಬಂದು ಉಚಿತಾಸನದಲ್ಲಿ ಕುಳಿತರು. ಶ್ರೀ ಶ್ರೀಗಳು ಮಹಾರಾಜರ ಅಂದಿನ ಅನಿರೀಕ್ಷಿತ ಭೇಟಿ ತಮಗೆ ಪರಮ ಸಂತೋಷವನ್ನುಂಟು ಮಾಡಿದೆ ಎಂದೂ, ಪರಮಾತ್ಮನ ಅವತಾರವಾದ ಆ ಪುಣ್ಯದಿನ ಅದೆಂದೂ, ಮಹಾರಾಜರಿಗೆ ಶ್ರೀ ಲಕ್ಷ್ಮೀಹಯಾಸ್ಯನ ಅವತಾರವಾದ ಆ ಪುಣ್ಯ ದಿನ ಅದೆಂದೂ, ಮಹಾರಾಜರಿಗೆ ಶ್ರೀಲಕ್ಷ್ಮೀಹಯಾಸ್ಯನ ದರ್ಶನ ದೊರೆತುದು ಅಭಿವೃದ್ಧಿ ಸೂಚಕವೆಂದೂ, ಪರಮಾತ್ಮನ ಕಟಾಕ್ಷವೇ ಇದಕ್ಕೆ ಕಾರಣವೆಂದೂ ತಿಳಿಸಿದರು. ಅನಂತರ ಶ್ರೀ ಮನ್ನಾರಾಯಣನು ಏತಕ್ಕಾಗಿ ಶ್ರೀಹಯಗ್ರೀವಾವತಾರ ಮಾಡಬೇಕಾಯಿತು? ಅವನು ವಿದ್ಯಾಭಿಮಾನ ದೇವತೆಯಾದುದು ಹೇಗೆ? ಅವನು ಹೇಗೆ ಶ್ರೀಮಠದ ಆರಾಧ್ಯ ದೇವನಾಗಿ ಪರಂಪರೆಯಿಂದ ಬಂದನು? ಇವೇ ಮುಂತಾದ ವಿಷಯಗಳನ್ನು ಸುಮಾರು ಅರ್ಧ ಘಂಟೆ ಕಾಲ ಮಹಾರಾಜರಿಗೆ ಗುರುಗಳು ತಿಳಿಸಿದರು.[9] ಮಹಾರಾಜರು ಪದೇ ಪದೇ ಶ್ರೀ ಮಠಕ್ಕೆ ದಯಮಾಡಿಸಿ ತಮ್ಮ ಪೂರ್ವೀಕರಂತೆ ದೇವರ ದರ್ಶನ ಮಾಡಿ ಕೃತಾರ್ಥರಾಗಬೇಕೆಂದು ಶ್ರೀಶ್ರೀಗಳು ಸೂಚಿಸಿದರು. ಹಾರ, ತುರಾಯಿ, ಖಿಲ್ಲತ್ತು, ಫಲಮಂತ್ರಾಕ್ಷತೆಯನ್ನು ಗುರುಗಳು ಮಾಹಾರಾಜರಿಗೆ ಅನುಗ್ರಹಿಸಿದರು ಅನಂತರ ಮಹಾರಾಜರು ಅರಮನೆಗೆ ತೆರಳಿದರು.

ಶ್ರೀಮದಭಿನವರಂಗನಾಥಬ್ರಹ್ಮ ತಂತ್ರ ಪರಕಾಲಸ್ವಾಮಿಗಳು ತಮ್ಮ ಪೂರ್ವಾಶ್ರಮದಲ್ಲಿಯೇ ಆಚಾರನಿಷ್ಠರಾಗಿ ಅವಗಾಹನ ಸ್ನಾನಾದಿ ಅಹ್ನಿಕ ವಿಷಯದಲ್ಲಿ ಅತ್ಯಂತ ಆಸಕ್ತರಾಗಿದ್ದರು. ಆಶ್ರಮ ಸ್ವೀಕಾರ ಮಾಡಿದ ಮೇಲೆ ನಿತ್ಯವೂ ಕುಕ್ಕರಹಳ್ಳಿ ಕೆರೆಗೆ ಸ್ನಾನಕ್ಕೆ ಹೋಗಿಬರುತ್ತಿದ್ದರು. ಇದನ್ನು ಕಂಡು ಮಹಾರಾಜರು ಗುರುಗಳ ಸೂಚನೆಯ ಪ್ರಕಾರ ಶ್ರೀಮಠದ ಪಕ್ಕದಲ್ಲಿಯೇ ಒಂದು ಸಣ್ಣ ಸರೋವರ ನಿರ್ಮಾಣಕ್ಕೂ, ಪುಷ್ಪೋದ್ಯಾನಕ್ಕೂ ಅವಕಾಶ ಕಲ್ಪಿಸಬೇಕೆಂದು, ಶ್ರೀ ಮಠದ ಪಶ್ಚಿಮ ಭಾಗದಲ್ಲಿ ವಿಶಾಲವಾದ ಸ್ಥಳವನ್ನು ಏರ್ಪಡಿಸುವಂತೆ ಅಧಿಕಾರಿಗಳಿಗೆ ತಿಳಿಸಿದರು. ಅದರಂತೆ ಪಕ್ಕದ ಕಟ್ಟಡಗಳನ್ನು ಕ್ರಯಕ್ಕೆ ತೆಗೆದು ಅದನ್ನು ಒಡೆದುಹಾಕಿ, ಬೈಲು ಪ್ರದೇಶವನ್ನಾಗಿ ಮಾಡಿ, ಕೊಳ ತೋಡಿಸಲಾಯಿತು. ಹೀಗೆ ನಿರ್ಮಾಣವಾದ ಚಿಕ್ಕ ಸರೋವರಕ್ಕೆ ಹಂಸಪುಷ್ಕರಿಣಿ ಎಂದು ಹೆಸರಿಟ್ಟರು ಅಲ್ಲಿ ಶ್ರೀ ಶ್ರೀಗಳು ತ್ರಿಕಾಲ ಸ್ನಾನಾದಿ, ಅಹ್ನಿಕಗಳನ್ನು ಮುಗಿಸುವುದಕ್ಕೆ ಅನುಕೂಲವಾಯಿತು.[10] ಸರೋವರದ ಸುತ್ತಮುತ್ತಲಿನ ಬೈಲುಪ್ರದೇಶವನ್ನು ಪುಷ್ಪ ತುಳಸೀ ಉದ್ಯಾನವನ್ನಾಗಿ ಪರಿವರ್ತಿಸಿ, ಸುತ್ತಲು ಗೋಡೆ ಹಾಕಿ, ಪಂಪುಸೆಟ್ಟು ಇಟ್ಟು ತೋಟಕ್ಕೆ ಯಥೇಚ್ಚವಾಗಿ ನೀರು ದೊರೆಯುವಂತೆ ಮಾಡಲಾಯಿತು. ಗುರುಗಳು ನಿತ್ಯವೂ ಇಲ್ಲಿಗೆ ಬಂದು ಹೂವಿನಗಿಡ ಮತ್ತು ತುಳಸಿಯನ್ನು ಬೆಳಸುವುದಕ್ಕೆ ತಕ್ಕ ಸಿಬ್ಬಂದಿ ಇಟ್ಟು ಸೂಕ್ತ ಸಲಹೆ ನೀಡುತ್ತಿದ್ದರು.

ಶ್ರೀ ಮದಭಿನವ ರಂಗನಾಥ ಪರಕಾಲಸ್ವಾಮಿಗಳ ಎಂಬತ್ತನೆಯ ತಿರುನಕ್ಷತ್ರ ಮಹೋತ್ಸವವು ಅತ್ಯಂತ ವಿಜೃಂಭಣೆಯಿಂದ ನಡೆಸಲಾಯಿತು. ಈ ವಿಶೇಷ ಉತ್ಸವಕ್ಕೆ ಶ್ರೀಮಹಾರಾಜರು ೫.೦೦೦ ರೂಪಾಯಿ ಸಹಾಯ ನೀಡಿದರು.[11] ಉತ್ಸವದ ಅಂಗವಾಗಿ ವಿಶೇಷ ಪೂಜೆ, ಪಾರಾಯನ, ವಿದ್ವತ್ಸಭೆ ಮುಂತಾದ ಕಾರ್ಯಕ್ರಮಗಳು ಏರ್ಪಟ್ಟವು. ಈ ಉತ್ಸವದ ಸಂದರ್ಭದಲ್ಲಿ ತಿರುಪತಿ, ಕಂಚಿ, ಮದರಾಸ್, ಆಳ್ವಾರ್–ತಿರುನಗರಿ ಶ್ರೀರಂಗ, ಮೇಲುಕೋಟೆ, ಬೆಂಗಳೂರು ಮುಂತಾದ ಕಡೆಗಳಿಂದ ವಿದ್ವಾಂಸರು ಬಂದಿದ್ದರು.

೧೯೬೪ನೆಯ ಇಸವಿ ಆಗಸ್ಟ್ ೧೧ನೆಯ ತಾರೀಖು ವಿದ್ವತ್‌ಸಭೆ ಬಹು ವೈಭವಪೂರಿತವಾಗಿತ್ತು. ಶ್ರೀಮಹಾರಾಜ ಜಯಚಾಮರಾಜ ಒಡೆಯರೇ ಸ್ವತಃ ದಯಮಾಡಿಸಿ ಇಪ್ಪತ್ತು ಮಂದಿ ಪ್ರಸಿದ್ಧ ವಿದ್ವಾಂಸರಿಗೆ, ಶ್ರೀಮಠದ ಪರವಾಗಿ, ಚಿನ್ನದ ಪದಕ, ಶಾಲುಜೋಡಿ, ಪ್ರಶಸ್ತಿ ಪತ್ರ, ಬಿರುದು ಮತ್ತು ಸಂಭಾವನೆ ಕೊಟ್ಟರು. ಇದಾದ ಮೇಲೆ, ದಾನಿಗಳಾದ ಸಾಹುಕಾರ್ ಟಿ.ತಿಮ್ಮಪ್ಪನವರಿಗೆ ರತ್ನಖಚಿತವಾದ ಬಂಗಾರದ ಗಂಡಬೇರುಂಢದ ಪದಕವನ್ನಿತ್ತು ಸನ್ಮಾನಿಸಿ "ಧರ್ಮಕಾರ್ಯಪ್ರವೀಣ" ಎಂಬ ಬಿರುದನ್ನೂ ಸಹ ಶ್ರೀ ಶ್ರೀಗಳು ಆಶೀರ್ವಾದ ಅನುಗ್ರಹದೊಡನೆ ಶ್ರೀ ಮಹಾರಾಜರೇ ಸ್ವಹಸ್ತದಿಂದ ದಯಪಾಲಿಸಿದರು. ಸರ್ವದಾ ವಿದ್ಯಾಭಿವೃದ್ಧಿ ಕಾರ್ಯದಲ್ಲಿಯೇ ಮಗ್ನರಾಗಿರುವ ಪೂಜ್ಯ ಗುರುಗಳಿಗೆ, ಪರಮಾತ್ಮನು ಆಯುರಾರೋಗ್ಯಗಳನ್ನು ಕರುಣಿಸಿ, ಶಿಷ್ಯಾನುಗ್ರಹ ಮಾಡುತ್ತಿರಲೆಂದು ಮಹಾರಾಜರು ಹಾರೈಸಿದರು. ಅನಂತರ ಶ್ರೀ ಮಠದ ಆಡಳಿತ ಮಂಡಳಿಯ ಅಧ್ಯಕ್ಷರು ಶ್ರೀಮನ್ಮಹಾರಾಜರಿಗೆ ಬಿನ್ನವತ್ತಳೆ ಅರ್ಪಿಸಿದರು. ಭವ್ಯವಾದ ಭವನದಿಂದ ಕೂಡಿರುವ ಶ್ರೀ ಮಠದಲ್ಲಿ ವಿದ್ಯಾಭಿವೃದ್ಧಿಯೂ, ವಿದ್ಯಾ ಪ್ರೋತ್ಸಾಹವೂ, ವಿದ್ವತ್ಸಭೆ, ಗ್ರಂಥ ರಚನೆ, ಗ್ರಂಥಕಾಲಕ್ಷೇಪಾದಿಗಳೂ ಅನೂಚಾನವಾಗಿ ನಡೆದುಬರುತ್ತಿರುವ ವಿಧಾನವನ್ನು ತಿಳಿಸಿದರು.[12] ಶ್ರೀ ಮಠಕ್ಕೂ ಅರಮನೆಗೂ ಬೆಳೆದುಬಂದ ಮತ್ತು ಬರುತ್ತಿರುವ ಬಾಂಧವ್ಯವನ್ನು ವಿಶದಪಡಿಸಲಾಯಿತು.

ಹೀಗೆ ಶ್ರೀ ಪರಕಾಲ ಮಠಕ್ಕೆ ಸಂಬಂಧಿಸಿದಂತೆ ಜಯಚಾಮರಾಜ ಒಡೆಯರು ವಂಶಪಾರ್ಯಂಪರ್ಯವಾಗಿ ತಮ್ಮ ವಂಶಜರು ಅನುಸರಿಸಿಕೊಂಡು ಬಂದಿದ್ದಂತಹ ಪದ್ಧತಿಯನ್ನೇ ಮುಂದುವರಿಸಿಕೊಂಡು ಬಂದರು. ಶ್ರೀ ಮಠದ ಸಂಪ್ರದಾಯಗಳನ್ನು ಸರ್ವೋತ್ಕೃಷ್ಟ ರೀತಿಯಲ್ಲಿ ಪಾಲಿಸಿಕೊಂಡು ಬರುತ್ತಿದ್ದರು. ತಮ್ಮ ಅಚ್ಚು ಮೆಚ್ಚಿನ ಗುರುಗಳಾಗಿದ್ದ ಶ್ರೀ ಮದಭಿನವ ರಂಗನಾಥ ಸ್ವಾಮಿಗಳ ಉಪದೇಶಾಮೃತ ವಾಕ್ಯಗಳನ್ನು ತಪ್ಪದೇ ಪಾಲಿಸುತ್ತಿದ್ದರು. ಅವರ ಗುರು ಭಕ್ತಿ ವಿಶೇಷ ರೀತಿಯದಾಗಿತ್ತು. ಅವರು ಅಲ್ಲಿಯ ಆಚಾರ್ಯಮೂರ್ತಿಗಳನ್ನು ಪೂಜಿಸಿ, ತಮ್ಮ ಭಕ್ತಿ, ಕಾಣಿಕೆಗಳನ್ನು ಅರ್ಪಿಸುತ್ತಿದ್ದರು. ಶ್ರೀಮಠದಲ್ಲಿ ಯಾವ ವಿಶೇಷ ಪೂಜೆ ನಡೆಯಲಿ, ಅದಕ್ಕಾಗಿ ಮಹಾರಾಜರಿಗೆ ಆಹ್ವಾನ ಹೋಗುತ್ತಿತ್ತು. ಹಾಗೆಯೇ ಅರಮನೆಯಲ್ಲಿ ಯಾವುದೇ ಪೂಜಾಕಾರ್ಯಗಳು ನಡೆದರೂ, ಶ್ರೀಮಠಕ್ಕೆ

ಪ್ರಾರ್ಥನ ಪತ್ರಿಕೆಯನ್ನು ಕಳುಹಿಸಲಾಗುತ್ತಿತ್ತು. ಶ್ರೀಮಠದಿಂದ ತೀರ್ಥಪ್ರಸಾದ ಅರಮನೆಗೆ ಬರುತ್ತಿತ್ತು. ಮಹಾರಾಜರು ಅನೇಕ ಸಲ ಶ್ರೀಮಠಕ್ಕೆ ದಯಮಾಡಿಸುವುದೂ ಹಾಗೂ ಶ್ರೀ ಮಠದ ಸ್ವಾಮಿಗಳು ಸಕಲ ರಾಜಮರ್ಯಾದೆಯಿಂದ ಅರಮನೆಗೆ ದಯಮಾಡಿಸುವುದು ಪದ್ಧತಿಯಾಗಿತ್ತು.

**ಅಡಿ ಟಿಪ್ಪಣಿ**

1. ನಂಜರಾಜ ಅರಸು ಪಿ.ವಿ, ಮೈಸೂರು ನೂರಿನ್ನೂರು ವರ್ಷಗಳ ಹಿಂದೆ, ಅಭಿರುಚಿ ಪ್ರಕಾಶನ, ಮೈಸೂರು, 2011, ಪು.206.
2. ಮೈಸೂರು ದರ್ಶನ, ಸಂಪುಟ 03, ಕೆ.ಎಸ್.ರಂಗಪ್ಪ (ಪ್ರಧಾನ ಸಂಪಾದಕರು), ಡಿ.ಕೆ.ರಾಜೆಂದ್ರ, ಮಲೆಯೂರು ಗುರುಸ್ವಾಮಿ ಮತ್ತು ವೈ.ಸಿ.ಭಾನುಮತಿ (ಸಂ), ಪ್ರಕಾಶಕರು, ಕರ್ನಾಟಕ ರಾಜ್ಯ ಮುಕ್ತ ವಿಶ್ವದ್ಯಾನಿಲಯ, ಮಾನಸಗಂಗೋತ್ರಿ, ಮೈಸೂರು, 2012, ಪು.35.
3. ನಂಜರಾಜ ಅರಸು ಪಿ.ವಿ, ಮೈಸೂರು ನೂರಿನ್ನೂರು ವರ್ಷಗಳ ಹಿಂದೆ, ಅಭಿರುಚಿ ಪ್ರಕಾಶನ, ಮೈಸೂರು, 2011, ಪು.206.
4. ನಾ.ನಾಗಲಿಂಗಸ್ವಾಮಿ, ರಾಜಋಷಿ ಜಯಚಾಮರಾಜೇಂದ್ರ ಒಡೆಯರ್, ಕನ್ನಡಪುತ್ರ ಪತ್ರಿಕಾಲಯ, ಮೈಸೂರು, 1983, ಪು.3.
5. ಕೃಷ್ಣಯ್ಯಂಗಾರ್ ಡಿ, ಶ್ರೀ ಪರಕಾಲಮಠದ ವೈಭವ, ಶ್ರೀಪರಕಾಲ ಮಠ, ಮೈಸೂರು, 1973, ಪು.177, 178.
6. ನ.ನಾಗಲಿಂಗಸ್ವಾಮಿ (ಸಂ), ಶ್ರೀ ಜಯಚಾಮರಾಜ ಒಡೆಯರ್ ಸ್ಮರಣ ಸಂಪುಟ, ಕನ್ನಡ ಕ್ರಾಂತಿದಳ, ಮೈಸೂರು, 1982, ಪು.8.
7. ಕೃಷ್ಣಯ್ಯಂಗಾರ್ ಡಿ, ಶ್ರೀ ಪರಕಾಲಮಠದ ವೈಭವ, ಶ್ರೀಪರಕಾಲ ಮಠ, ಮೈಸೂರು, 1973, ಪು.182, 183.
8. ಅದೇ, ಪು.183
9. ಅದೇ, ಪು.184, 185.
10. ಅದೇ, ಪು.206)
11. ನ.ನಾಗಲಿಂಗಸ್ವಾಮಿ (ಸಂ), ಶ್ರೀ ಜಯಚಾಮರಾಜ ಒಡೆಯರ್ ಸ್ಮರಣ ಸಂಪುಟ, ಕನ್ನಡ ಕ್ರಾಂತಿದಳ, ಮೈಸೂರು, 1982, ಪು.8.
12. ಅದೇ, ಪು.9.